**ಓ.ಎಸ್. ನಂಃ 277/2016**
**ಪಿಡಬ್ಲ್ಯೂಃ 2**

ದಿನಾಂಕಃ 25-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎ ಎಸ್ ಪಿ ವಕೀಲರಿಂದಃ</u>

ನಾನು ಕಬ್ಬೇರ್ (ಕೋಲಿ) ಸಮಾಜಕ್ಕೆ ಸೇರಿರುತ್ತೇನೆ. ಈ ದಾವೆಯನ್ನು ಅನಂತಮ್ಮ ರವರ ದಾಖಲು ಮಾಡಿದ್ದಾರೆ. ನಮ್ಮ ಹಾಗೂ ವಾದಿಯ ಮನೆಗಳು ದೂರ ಇದ್ದಾವೆ ಎಂದರೆ ಸರಿಯಲ್ಲ. ವಾದಿ ನಿಮ್ಮ ಸಂಬಂಧಿಕರಾಗಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂಗಿ ಆಗಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಜಮೀನು 10 ಎಕರೆ ಮೇಲ್ಪಟ್ಟು ಇರುತ್ತದೆ. ನನಗೆ ದಾವಾ ಜಮೀನಿನ ಸರ್ವೆ ನಂಬರು ಗೊತ್ತಿಲ್ಲ. ನಾನು ಅಂತಪ್ಪನನ್ನು ನೋಡಿದ್ದೆನು. ಆತ ತೀರಿಕೊಂಡು ಈಗ 10 ವರ್ಷ ಮೇಲ್ಪಟ್ಟು ಆಗಿರುತ್ತದೆ. ಆತ ತೀರಿಕೊಂಡಾಗ ಆತನಿಗೆ 60 ಮೇಲ್ಪಟ್ಟು ವಯಸ್ಸಾಗಿತ್ತು. ನಿಮಗೆ ಅಂತಪ್ಪನ ತಂದೆ-ತಾಯಿಯ ಹೆಸರು ಗೊತ್ತಿದೆಯೇ ಎಂದರೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರ ನೀಡಿರುವುದಿಲ್ಲ. ಅಂತಪ್ಪನಿಗೆ ಒಬ್ಬ ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ.

2. ನನಗೆ ಕನ್ನಡ ಓದಲು ಹಾಗೂ ಬರೆಯಲು ಬರುವುದಿಲ್ಲ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನಗೆ ಅಂತಪ್ಪನ ತಂದೆ ತಾಯಿಯ ಹೆಸರುಗಳು ಗೊತ್ತಿಲ್ಲ. ಅಂತಪ್ಪನ ಹೆಂಡತಿಯ ಹೆಸರು ಹಣಮಂತಿ ಮತ್ತು ಸಾಯಮ್ಮ ಎಂದು ಇರುತ್ತದೆ. ನಾನು ಅಂತಪ್ಪನ ಮದುವೆಗೆ ಹೋಗಿರಲಿಲ್ಲ. ಅಂತಪ್ಪನ ಮದುವೆ ಸಾಯಮ್ಮ ರವರೊಂದಿಗೆ ಆಗಿರುವುದು ನಿಮಗೆ ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರ ನೀಡಿರುವುದಿಲ್ಲ. 1 ನೇ ಪ್ರತಿವಾದಿ ಸಾಯಮ್ಮ ರವರ ಮಗಳಾಗಿರುತ್ತಾಳೆ ಎಂದರೆ ಸರಿ. 2 ನೇ ಪ್ರತಿವಾದಿ ಹಣಮಂತಿ ರವರ ಮಗ ಆಗಿರುತ್ತಾನೆ. 1 ನೇ ಪ್ರತಿವಾದಿ ಮಾತ್ರ ಸಾಯಮ್ಮ ರವರ ಮಗಳಾಗಿರುತ್ತಾಳೆ ಎಂದರೆ ಸಾಕ್ಷಿಯು ಅವರಿಗೆ ಇಬ್ಬರು ಮಕ್ಕಳಿರುತ್ತಾರೆ ಎಂದು ನುಡಿಯುತ್ತಾರೆ. ಸಾಯಮ್ಮ ಒಬ್ಬರು ಮಾತ್ರ ಅಂತಪ್ಪನ ಹೆಂಡತಿ ಆಗಿದ್ದರು ಎಂದರೆ ಸರಿಯಲ್ಲ. ಸಾಯಮ್ಮನಿಗೂ ಸಹ 1 ನೇ ಪ್ರತಿವಾದಿಯನ್ನು ಹೊರತು ಪಡಿಸಿ ಬೇರೆ ಮಕ್ಕಳಿರಲಿಲ್ಲ ಎಂದರೆ ಸರಿಯಲ್ಲ. ಅಂತಪ್ಪ ಹಾಗೂ ಅನಂತಮ್ಮ ರವರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸದರಿ ಅಂತಪ್ಪ ಹಾಗೂ ಅನಂತಮ್ಮ ರವರ ಮಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಂತಪ್ಪನ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ನಾನು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ವಾದಿ ಅಂತಮ್ಮ ಹಾಗೂ ಅಂತಪ್ಪನಿಗೆ ಯಾವುದೇ ಸಂಬಂಧ ಇಲ್ಲದಿದ್ದರೂ ಸುಳ್ಳು ದಾವೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ